




# ಭಗವಂತನ ಕೃಪೆ


**ಕಥೆ : ಸ್ವಾಮಿ ವಿಮೂರ್ತಾನಂದ**


**ಚಿತ್ರ : ಪದ್ಮವಾಸನ್**








4
ಸುರೇಂದ್ರ ಹಾರವನ್ನು ತಂದ..
ಸ್ನೇಹಿತರೇ, ಬನ್ನಿ ಜೊತೆಗೆ.. ಈ ಸುಂದರ ಹಾರವನ್ನು ಠಾಕೂರರಿಗೆ ಹಾಕೋಣ ಬನ್ನಿ.
ಹೀಗೆ ಹೇಳುತ್ತ ಸುರೇಂದ್ರನು ಜಂಭದಿಂದ ಶ್ರೀರಾಮಕೃಷ್ಣರಿಗೆ ಹಾರವನ್ನು ಹಾಕಲು ಮುಂದಾದ. ಆಗ ಎಲ್ಲರಿಗೂ ಆಶ್ಚರ್ಯವಾಗುವಂತೆ..
5
ಶ್ರೀರಾಮಕೃಷ್ಣರು ಹಾರವನ್ನು ಕೈಯಲ್ಲಿ ತೆಗೆದುಕೊಂಡು ಪಕ್ಕಕ್ಕೆ ಎಸೆದುಬಿಟ್ಟರು. ಅವರ ನರ್ತನ ಮುಂದುವರಿಯಿತು.
ಅಯ್ಯೋ! ಠಾಕೂರರಿಗೆ ಏನಾಯಿತು? ಅವರೇಕೆ ಹಾರವನ್ನು ಸ್ವೀಕಾರ ಮಾಡಲಿಲ್ಲ?
6
ಸುರೇಂದ್ರನ ಜಂಭಕ್ಕೆ ಚೆನ್ನಾಗಿ ಏಟು ಬಿತ್ತು. ಅವನು ಕೂಡಲೇ ಅಲ್ಲಿಂದ ಹೊರಟುಹೋದ. ಶ್ರೀರಾಮಕೃಷ್ಣರು ತನಗೆ ಗೌರವ ನೀಡಲಿಲ್ಲವೆಂದು ಅವನು ಭಾವಿಸಿದ. ತನ್ನ ಸ್ನೇಹಿತರಿಗೆ ಹೇಳಿದ..
ನೋಡಿ..ನನಗೆ ತುಂಬಾ ಕೋಪ ಬಂದಿದೆ. ಇಂಥ ಬೆಲೆಬಾಳುವ ಹಾರ ಎಷ್ಟು ಅಮೂಲ್ಯವೆಂದು ಈ ಬಡ ಬ್ರಾಹ್ಮಣರಿಗೆ ಹೇಗೆ ಗೊತ್ತಾಗಬೇಕು? ಕೈಗೆ ಸಿಕ್ಕಿದ್ದನ್ನೆಲ್ಲ ಅವರು ಎಸೆದುಬಿಡುತ್ತಾರೆ!
7
ಸುರೇಂದ್ರನಿಗೆ ನಿಯಂತ್ರಣ ತಪ್ಪಿ ಹೋಯಿತು. ಆದರೂ ಅವನು ಶ್ರೀರಾಮಕೃಷ್ಣರ ಭಕ್ತನಾಗಿದ್ದ. ಅವನಿಗೆ ಬೇಗನೆ ತನ್ನ ತಪ್ಪಿನ ಅರಿವಾಯಿತು.
ಓ! ಇದೆಲ್ಲ ನನ್ನದೇ ತಪ್ಪು.. ನನಗೀಗ ಅರ್ಥವಾಗುತ್ತಿದೆ. ಹಣದಿಂದ ದೇವರನ್ನು ಕೊಂಡುಕೊಳ್ಳಲಾಗದು. ನಾನು ಸ್ವಾರ್ಥ, ಜಂಭಗಳಿಂದ ಕೂಡಿದ್ದೆ.. ಠಾಕೂರರು ತ್ಯಾಗವೇ ಅವತಾರವೆತ್ತಿ ಬಂದವರು.


8
ಅವನ ಸ್ನೇಹಿತರು ಅವನನ್ನು ಸಮಾಧಾನಪಡಿಸಿದರು.
ಠಾಕೂರರು ಖಂಡಿತ ನಿನ್ನನ್ನು ಕ್ಷಮಿಸುವರು. ನಿನಗೆ ಅಷ್ಟು ತಿಳಿಯದೆ?
ನನ್ನ ವರ್ತನೆ ನನಗೆ ಅಸಹ್ಯವೆನಿಸುತ್ತಿದೆ. ಯಾರಲ್ಲಿ ಅಹಂಕಾರವಿಲ್ಲವೋ ಅವರ ಮೇಲೆ ಮಾತ್ರ ಭಗವಂತನ ಕೃಪೆ ಯಾಗುವುದು. ಠಾಕೂರರ ಕೃಪೆಯನ್ನು ಹೊಂದುವ ಯೋಗ್ಯತೆ ನನಗಿಲ್ಲ. ಅವರ ಕೃಪೆ ನನ್ನ ಮೇಲಾಗದಿದ್ದರೆ, ನಾನು ಬದುಕಿ ಪ್ರಯೋಜನವೇನು? ನನಗೆ ಜೀವನವೇ ಸಾಕೆನಿಸಿಬಿಟ್ಟಿದೆ.
9
ಈ ರೀತಿ ಒಂದೆಡೆ ಸುರೇಂದ್ರನು ತನ್ನ ಸ್ನೇಹಿತರೊಂದಿಗೆ ಗೋಳಾಡುತ್ತಿದ್ದಾಗ...
...ಇನ್ನೊಂದೆಡೆ ಉಳಿದೆಲ್ಲ ಭಕ್ತರು ಶ್ರೀರಾಮಕೃಷ್ಣರೊಂದಿಗೆ ಹಾಡುತ್ತ ನರ್ತಿಸುತ್ತಿದ್ದರು. ಅವರೆಲ್ಲ ಪರಮಾನಂದವನ್ನು ಅನುಭವಿಸಿದರು.
10
ಸುರೇಂದ್ರನು ತನ್ನ ತಪ್ಪನ್ನರಿತು ಪಶ್ಚಾತ್ತಾಪಪಟ್ಟುಕೊಂಡ. ಇದರಿಂದ ಅವನ ಅಹಂಕಾರ ನುಚ್ಚುನೂರಾಗಿ, ಸಂಪೂರ್ಣ ತೊಲಗಿ ಹೋಯಿತು. ಶ್ರೀರಾಮಕೃಷ್ಣರು ಮೊದಲು ಎಸೆದು ಬಿಟ್ಟಿದ್ದ ಅದೇ ಹಾರವನ್ನು ಈಗ ತಮಗೆ ತಾವೇ ಹಾಕಿ ಅಲಂಕರಿಸಿಕೊಂಡರು.
11
ಸುರೇಂದ್ರ ! ಎಲ್ಲಿಗೆ ಹೋಗಿದ್ದೆ ನೀನು? ಇಲ್ಲಿ ನೋಡು! ಗುರುದೇವರು ನಿನ್ನ ಹಾರವನ್ನು ಹಾಕಿಕೊಂಡು ಭಾವೋನ್ಮತ್ತರಾಗಿ ನರ್ತಿಸುತ್ತಿದ್ದಾರೆ.
ಆಹ! ಠಾಕೂರರ ಕೃಪೆ ಎಂತಹದೆಂದು ವರ್ಣಿಸಲು ಪದಗಳೇ ಇಲ್ಲ. ಈ ಮೊದಲು ಅವರ ಕೃಪೆಯಾಗದಂತೆ ನನ್ನ ಅಹಂಕಾರವೇ ಅಡ್ಡಿ ಯಾಗುತ್ತಿತ್ತು . ದೀನರು, ವಿನಯವಂತರು ಮಾತ್ರ ಅವರ ಪ್ರೀತಿಗೆ ಪಾತ್ರರಾಗುತ್ತಾರೆ. ನನ್ನ ಅಹಂಕಾರವನ್ನು ತೊಲಗಿಸಿದ ಅವರಿಗೆ ನಾನು ಸಾವಿರ ಪ್ರಣಾಮ ಸಲ್ಲಿಸುತ್ತೇನೆ!


12
ಪ್ರೇಮೋನ್ಮತ್ತ ನರ್ತನದ ನಂತರ ಶ್ರೀರಾಮಕೃಷ್ಣರು ಆ ಹಾರವನ್ನು ಧರಿಸಿಕೊಂಡೇ ಭಕ್ತರೊಡನೆ ಮಾತುಕತೆ ನಡೆಸಿದರು.
ಕಲಿಯುಗದಲ್ಲಿ ಭಕ್ತಿಯೇ ಸಾಧನೆಯ ಮಾರ್ಗ. ಭಕ್ತಿಗೆ ಮತ್ತು ಭಗವಂತನ ಕೃಪೆಗೆ ಅಹಂಕಾರವೆಂಬುದು ಅತಿದೊಡ್ಡ ಅಡಚಣೆಯಾಗಿದೆ. ನಾವು ಸ್ವಲ್ಪವೂ ಅಹಂಕಾರವಿಲ್ಲದೆ ಭಗವಂತನ ಸೇವೆ ಮಾಡಬೇಕು.
13
ಸುರೇಂದ್ರನು ಸಂಪೂರ್ಣವಾಗಿ ಪರಿವರ್ತನೆ ಹೊಂದಿದ್ದ. ಶ್ರೀರಾಮಕೃಷ್ಣರು ಸಮಾಧಿಯಲ್ಲಿದ್ದಾಗ ಅವರಿಗೆ ಬಾಹ್ಯಜಗತ್ತಿನ ಅರಿವು ಸ್ವಲ್ಪವೂ ಇರಲಿಲ್ಲ. ಆದ್ದರಿಂದ ಸುರೇಂದ್ರನಿಗೆ ಏನಾಯಿತು ಎಂದು ಅವರಿಗೆ ತಿಳಿದಿರಲಿಲ್ಲ. ಬಾಹ್ಯಪ್ರಜ್ಞೆಗೆ ಮರಳಿದಾಗ ಅವರು ಸುರೇಂದ್ರನನ್ನು ಕೇಳಿದರು.
ಸುರೇಂದ್ರ, ನನಗೆ ತಿನ್ನಲು ಏನಾದರೂ ಕೊಡುತ್ತೀಯಾ? ನನಗೆ ತುಂಬಾ ಹಸಿವಾಗಿದೆ...!
ಖಂಡಿತ! ಈಗಲೇ ನಾನು ಏನಾದರೂ ಆಹಾರ ತರುತ್ತೇನೆ.
14
ಆಹಾರ ಸ್ವೀಕರಿಸಿದ ನಂತರ ಶ್ರೀರಾಮಕೃಷ್ಣರು ಎಲ್ಲ ಭಕ್ತರನ್ನೂ ಆಶೀರ್ವದಿಸಿದರು...
ಸುರೇಂದ್ರನಾಥ ಮಿತ್ರನು ಶ್ರೀರಾಮಕೃಷ್ಣರ ಎಲ್ಲ ಅಗತ್ಯಗಳನ್ನೂ ಪೂರೈಸಿದ ನಾಲ್ವರು 'ರಸದ್ದಾರ'ರಲ್ಲಿ ಒಬ್ಬನಾಗಿದ್ದ. ಅವರ ಮಹಾಸಮಾಧಿಯ ನಂತರವೂ ಅವನು ತನ್ನ ಸೇವೆಯನ್ನು ಮುಂದುವರಿಸಿದ. ಮುಂದೆ ವಿಶ್ವವಿಖ್ಯಾತವಾದ ರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಲು ಸ್ವಾಮಿ ವಿವೇಕಾನಂದರಿಗೆ ನೆರವಾದವರಲ್ಲಿ ಸುರೇಂದ್ರನೇ ಮೊದಲಿಗನಾಗಿದ್ದ.